ಶ್ರೀ ಟಿ ಸಿದ್ದಲಿಂಗಯ್ಯ.—ಎಲ್ಲರಿಗೂ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂಬುದೇ ನಮ್ಮ ನೀತಿ. ಆದರೆ ಹಣ ಮತ್ತು ಸಾಮಾನುಗಳು ಯಾವ ರೀತಿ ಒದಗುತ್ತವೋ ಅದರ ಮೇರೆ ಹೋಗುತ್ತದೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ರೋಡ್ ಸಾ ದೆಂದು ಹೇಳಿದ್ದೀರಿ. ಜೋಗಿನಿಂದ ಬೆಂಗಳೂರಿಗೆ ಎರೆಕ್ಟ್ರಿಸಿಟಿ ತರುವಾಗ ತಿಪಟೂರೂ ಒಂದು ಟ್ಯಾಪಿಂಗ್ ಸ್ಟೇಷನ್ ಅಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯ.—ಹೌದು.

ಶ್ರೀ ಬಿ ಹುಚ್ಚೇಗೌಡ.— ಅದೊಂದು main tapping station ಆದಮೇಲೆ ಅಲ್ಲಿಂದೇಕೆ ವಿದ್ಯುಚ್ಛಕ್ತಿಯನ್ನೊದಗಿಸಕೂಡದು ?

ಶ್ರೀ ಟಿ ಸಿದ್ದಲಿಂಗಯ್ಯ.—ಹಾಲಿ ಅಲ್ಲಿರುವ ಸ್ಟೇಷನ್ನಿಗೆ ಇರುವ ಲೋಡ್ ಜಾಸ್ತಿ. ಅದು ಎಷ್ಟೋ ವರ್ಷಗಳ ಹಿಂದೆ ಸ್ಥಾಪನೆಯಾದದ್ದು. ಈಗ ಹೊಸದಾಗಿ ತೆಗೆದುಕೊಳ್ಳಬೇಕಾದರೆ ಹೊಸ ಟ್ರಾನ್ಸ್‌ಫಾರ್ಮರ್ ಹಾಕಬೇಕು.

ಶ್ರೀ ಬಿ. ಹುಚ್ಚೇಗೌಡ.—ಹೋದವರ್ಷ ತಾನೆ ಹೊಸ ಲೈನನ್ನು ತೆಗೆದುಕೊಂಡಿರುವುದು. ಜೋಗಿನಿಂದ ಬೆಂಗಳೂರಿಗೆ ಬರುವ ಲೈನ್‌ನಲ್ಲಿ ಇದೊಂದೇಕಡೆ tap ಮಾಡಿರುವುದು. ಈ ಊರುಗಳೆಲ್ಲಾ ಆ ಲೈನಿಗೆ ಹತ್ತಿರದಲ್ಲೇ ಇವೆ.

ಶ್ರೀ ಟಿ. ಸಿದ್ದಲಿಂಗಯ್ಯ.—ನಮಗೀಗ limited capacity ಯಿದೆಯೆಂದು ತಿಳಿದುಕೊಂಡಿದ್ದೇವೆ. ಈಗ ನೀವು ಹೇಳಿದಮೇಲೆ ವಿಚಾರಿಸುತ್ತೇವೆ.

Higher scales of pay to under-graduates entering the Education Department.

Q.—27. **Sri S. SRINIVASA IYENGAR** (T.-Narasipur).—

Will the Government be pleased to state :—

(*a*) whether an under-graduate entering the services of the Education Department in the ministerial line has chances of having the benefit of Rs. 60-5-90-6-150 after completing Rs. 40-2-50-3-80;

(*b*) whether an under-graduate entering the services of the Education Department in the tutorial line has only the benefit of having Rs. 40-2-50-3-80;

(*c*) whether it is not a fact that Sri K. Guru Dutt, the ex-Director of Public Instruction, had submitted a proposal to Government to provide a scale of Rs 80-4-120 to the under-graduates who completed Rs. 40-2-50-3-80 ; if so, at what stage the proposal is pending ?

A.—**Sri A. G. RAMACHANDRA RAO** (Minister for Law and Education.—

(*a*) Yes, according to seniority.

(*b*) Yes. There is at present only one uniform scale of Rs. 40-2-50/E.B. 3-80 for all non-graduate teachers in Middle Schools.

(*c*) Yes. The question is under consideration.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ವರದಿಯು ಸರ್ಕಾರಕ್ಕೆ ಯಾವಾಗ ಬಂತು ?

Sri A. G. RAMACHANDRA RAO.—I think about a year ago.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅದನ್ನು ಪರ್ಯಾಲೋಚಿಸುವುದಕ್ಕೆ ಎಷ್ಟು ದಿವಸ ತೆಗೆದುಕೊಳ್ಳುತ್ತೀರಿ ?

Sri A. G. RAMACHANDRA RAO.—A dicision will have to be reached if the financial conditions of the State improve.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಒಂದೇ ಇಲಾಖೆಯಲ್ಲಿ ಒಂದೇಅರ್ಹತೆಯುಳ್ಳ ನೌಕರ ಮಾನೆಯರಿಗೆ ಬರತಕ್ಕ ಸಂಬಳದಲ್ಲಿ ವ್ಯತ್ಯಾಸವಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri A. G. RAMACHANDRA RAO.—I see the anomaly, but it has persisted for years.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ತುಟ್ಟಿಭತ್ಯವನ್ನು ಹೆಚ್ಚು ಮಾಡದಿರುವ ಈ ಕಾಲದಲ್ಲಿ ಕೆಳದರ್ಜೆಯ ನೌಕರರು ಜೀವನ ಮಾಡುವುದು ಬಹಳ ಕಷ್ಟವಾಗಿದೆ ಯೆಂಬುದು ತಮಗೆ ಗೊತ್ತಿದೆಯೇ ?

Sri A. G. RAMACHANDRA RAO.—It is a matter of opinion.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಅದಷ್ಟು ಜಾಗ್ರತೆ ತರಿಸಿಕೊಂಡು ಆ ವಿಷಯವನ್ನು ತೀರ್ಮಾನ ಮಾಡುತ್ತೀರಾ ?

Sri A. G. RAMACHANDRA RAO.—Yes, Government will consider.

Mr. SPEAKER.—Questions Nos. 132, 133 and 294 may be taken up together as they are similar.

Education Reforms in Mysore.

Q.—132. **Sri G. A. THIMMAPPA GOWDA** (Arkalgud).—

Will the Government be pleased to state :—

(*a*) whether the Education Reforms Committee newly formed under

the Chairmanship of the Chief Minister of Mysore, has any connection with the other Education Reform bodies formed by the Government of India and other State Governments ;

(*b*) whether this Committee has supreme powers with regard to final decision irrespective of the Central Education Reform Bodies ?

A.—**Sri A. G. RAMACHANDRA RAO** (Minister for Law and Education).—

(*a*) It has no connection with the Re orm Bodies for ned by the Government of India or other State Gove nments.

(*b*) The Mysore Committee wil necessarily take account of the recommendations of Educational Com mittees set up by the Government of India, before formulating their recommen lations for submission to the Government of Mysore which has to finally decide in the matter.

Q.—133. **Sri G. A. THIMMAPPA GOWDA** (Arkalgud).—

Will the Government be pleased to state :—

(*a*) whether the present system of education will be changed so that it will have rural character ;

(*b*) whether they have any idea of starting separate rural Universities ;

(*c*) whether they are thinking of not recognising the University Degree for the purpose of appointments and whether they are going to hold separate tests for each class of appointments ?

A.—**Sri A. G. RAMACHANDRA RAO** (Minister for Law and Education).—

(*a*) to (*c*) All these are matters that come within the purview of the Committee on Educational Reform and the Government is awaiting their recommendations.

Q.—294. **Sri K. PRABHAKAR** (Nelamangala—Scheduled Castes).—

Will the Government be pleased to state :—

(*a*) the nature of changes in the field of Education sought for by the policy of "Educational Reforms" in Mysore ;

(*b*) what exactly is the status of the Teachers and Lecturers and Professors according to the "Reforms"?

A.—**Sri A. G. RAMACHANDRA RAO** (Minister for Law and Education).—

(*a*) These are under the consideration of the Committee for Educational Reforms. No decision has yet been taken.

(*b*) Does not arise in view of answer to (*a*) above.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಭಾರತ ಸರ್ಕಾರದ ವರು ರಚಿಸಿರುವ ಸೆಕೆಂಡರಿ ಎಜುಕೇಷ್ಷ ನ ಸಮಿತಿ ಮತ್ತು ಇತರ ಸಮಿತಿಗಳ ಶಿಫಾರಸುಗಳು ಭಾರತಾ ದ್ಯಂತ ಇರತಕ್ಕ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಮತ್ತು ವಿದ್ಯಾ ಇಲಾಖೆಯವರಿಗೂ ಸರ್ವಸಾಮಾನ್ಯ ವಾಗಿ ಅನ್ವಯವಾಗಬೇಕೆಂದು ತಾನೆ ಆಗಿರುವುದು?

Sri A. G. RAMACHANDRA RAO.—Obviously.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಿದ್ದಮೇಲೆ ನಮ್ಮ ಮೈಸೂರು ಸರ್ಕಾರದವರು ನಮ್ಮ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯವರ ಶಿಫಾರಸ್ಸುಗಳೂ ಅದರ ಮೇಲೆ ಸರ್ಕಾರದ ಶಿಫಾರ ಸ್ಸುಗಳೂ ಡಿಸೆಂಬರ್ ಆಖ್ಯೆರೊಳಗೆ ಪೂರೈಸಬೇಕೆಂದಿ ರುವುದು ಸಾಧ್ಯವಲ್ಲ ಅಲ್ಲವೇ ?

Sri A. G. RAMACHANDRA RAO.—The All-India Committees give general indications. They have got to be applied to the particular conditions in Mysore. That is one. The other is, these Committees of All-India nature deal with particular aspects of education, whereas the Committee in Mysore will deal with the entire question.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆದ್ದರಿಂದ ಆ ಕಮಿ ಟಿಯವರ ಶಿಫಾರಸ್ಸುಗಳು ಬರುವವರೆಗೂ ಕೂಡ ನಮ್ಮ ಮೈಸೂರಿನಲ್ಲಿರತಕ್ಕ ಸಮಿತಿಯವರೂ ಅಲ್ಲಿನ ಸಲಹೆಗಳಿಗೆ ಕಾಯಬೇಕಾದದ್ದು ಉಚಿತವಲ್ಲವೇ?

Sri A. G. RAMACHANDRA RAO.—That would be waiting indefinitely.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹಾಗಾದರೆ ನಮ್ಮ ಕಮಿಟಿಯವರ ಶಿಫಾರಸಿನಂತೆ ತಾವು ಜಾರಿಗೆ ಕೊಟ್ಟ ಪಕ್ಷದಲ್ಲಿ ಭಾರತ ಸರ್ಕಾರದವರು ಕೂಡತಕ್ಕ ಸಲಹೆಗ ಳನ್ನು ಯಾವರೀತಿ ತೆಗೆದುಕೊಳ್ಳುತ್ತೀರಿ ?

Sri A. G. RAMACHANDRA RAO.—When those recommendations come, they will be considered at the proper time and due weight will be given.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ನಮ್ಮ ಸರ್ಕಾರದ ವರು ಇಲ್ಲಿನ ಕಮಿಟಿಯ ಶಿಫಾರಸ್ಸುಗಳನ್ನು ಜಾರಿಗೆ ಕೊಡುವ ವೇಳೆಯಲ್ಲಿ ಅಲ್ಲಿಂದ ಶಿಫಾರಸ್ಸುಗಳು ಬಂದರೆ